## ಸ್ಲೀಪಿಂಗ್ ಲೈನ್

ಎಲ್‌ಕೆಜಿ ಕ್ಲಾಸ್ ನಡೆಯುತ್ತಿತ್ತು. ಟೀಚರ್ ಮಕ್ಕಳಿಗೆ ಸ್ಟ್ಯಾಂಡಿಂಗ್ ಲೈನ್ ಮತ್ತು ಸ್ಲೀಪಿಂಗ್ ಲೈನ್ ಬರೆಯುವುದನ್ನು ಹೇಳಿಕೊಟ್ಟರು. ಮಾರನೇ ದಿನ ಕ್ಲಾಸ್ ಆರಂಭವಾಗುತ್ತಿದ್ದಂತೆ, 'ಮಕ್ಕಳೇ, ನಿನ್ನೆ ಹೇಳಿಕೊಟ್ಟಿದ್ದ ಸ್ಲೀಪಿಂಗ್ ಲೈನ್, ಸ್ಟ್ಯಾಂಡಿಂಗ್ ಲೈನ್ ಬರೆದು ತೋರಿಸಿ ನೋಡೋಣ' ಎಂದರು ಟೀಚರ್. ಎಲ್ಲ ಮಕ್ಕಳು ಬರೆದು ತೋರಿಸಿದರು. ಈಶ ಬರೀ ಸ್ಟ್ಯಾಂಡಿಂಗ್ ಲೈನ್ ಮಾತ್ರ ಬರೆದಿದ್ದ. ಟೀಚರ್, 'ಸ್ಲೀಪಿಂಗ್ ಲೈನ್ ಯಾಕೊ ಬರೆದಿಲ್ಲ?' ಎಂದು ಅವನನ್ನು ಕೇಳಿದರು. ಈಶ, 'ಸ್ಲೀಪಿಂಗ್ ಲೈನ್ ಇನ್ನೂ ಮಲಗಿದೆ ಸರ್' ಎಂದ. ಅವನ ಮಾತಿಗೆ ಟೀಚರ್ ಅವಾಕ್ಕಾದರು.

**ಸುಮನಾ**





ಕಲೆ: ಗಣೇಶ ಆಚಾರ್ಯ

## ವ್ಯಾಪ್ತಿ ಪ್ರದೇಶದ ಹೊರಗೆ

ಪರಮೇಶಿಗೆ ಹೆಂಡತಿ ಪದ್ಮಾ ಮಧ್ಯಾಹ್ನ ಫೋನ್ ಮಾಡಿದಳು. ಪರಮೇಶಿ ಆಗ ಒಂದಿಷ್ಟು ಮೋಜು ಮಾಡುವ ಮನಸ್ಸಿನಲ್ಲಿದ್ದ. ಪದ್ಮಾ, 'ರೀ, ಊಟ ಆಯ್ತೇನ್ರಿ?' ಎಂದು ಕೇಳಿದಳು. ಪರಮೇಶಿಯೂ ಅದನ್ನೇ ಪುನರಾವರ್ತಿಸಿದ. ಪದ್ಮಾ, 'ನಾನು ನಿಮ್ಮನ್ನ ಕೇಳ್ತಾ ಇದ್ದೀನಿ' ಎಂದಳು. ಅವಳಾಡಿದ ಮಾತುಗಳನ್ನೇ ಮತ್ತೆ ಆಡಿದ. ಪದ್ಮಾ, 'ಏನ್ರಿ? ನಾನು ಹೇಳಿದಂಗೇ ಹೇಳ್ತಾ ಇದ್ದೀರಿ?' ಕೇಳಿದಳು. ಪರಮೇಶಿ ಮತ್ತೂ ಅವಳ ಮಾತನ್ನೇ ಹೇಳಿದ. ಪದ್ಮಾ, 'ರೀ, ಮಾಡೋಕೆ ಕೆಲ್ಸ ಇಲ್ಲ ಅನ್ಸುತ್ತೆ, ಎದ್ದು ಬನ್ನಿ, ಶಾಪಿಂಗ್ ಹೋಗೋಣ' ಎಂದಳು. ಕೂಡಲೇ ಪರಮೇಶಿ, 'ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಎಂದು ಹೇಳಿ ಫೋನ್ ಇಟ್ಟ.

**ಅನಿತಾ ವಸ್ತ್ರದ್**